"ಅದಿರಲಿ, ನಾನೀಗ ಅಪಾಯದಿಂದ ಹೊರಬಂದಿದ್ದೀನೋ ಇಲ್ವೋ?"

"ಸದ್ಯಕ್ಕೆ ನೀವು ಊಟ ಮುಗಿಸದಿದ್ದರೆ ನಿಜಕ್ಕೂ ಅಪಾಯವೇ! ಹಸಿವಿನ ತಾಪ, ಆರದ ಬೆಂಕಿಯ ತಾಪ! ಅದಕ್ಕೇ ನೀವು 'ಶಿವಪ್ಪ ಕಾಯೋ ತಂದೆ, ಹಸಿವೆಯನ್ನು ತಾಳಲಾರೆ...' ಎನ್ನುತ್ತಾ, ಬೇಡರ ಕಣ್ಣಪ್ಪ ಸಿನಿಮಾದ ಹಸಿವೆಯ ಹಾಡನ್ನು ಹಾಡುತ್ತಾ ಕಾಲ ಕಳೆಯಬೇಕಾಗುತ್ತದೆ."

"ಪ್ರೇಮ ತಾಪವೂ ಒಂದು ರೀತಿಯಲ್ಲಿ ಹಸಿವೆಯ ತಾಪದಂತಹುದೇ ಅಲ್ಲವೇ? ನೀವು ಒಂದು ರೀತಿಯಲ್ಲಿ ಗಡುಸೇ. ನಿಮ್ಮಂತಹವರು ಅಪರೂಪ! ಬೇರೆಲ್ಲೂ ಇರಲಾರರು."

"ಮಜ್ಜಿಗೆಹುಳಿ ಮತ್ತಷ್ಟು ಬಡಿಸಲೆ?"

"ಟೋಕಿಯೊದಲ್ಲಿ ಮಜ್ಜಿಗೆಹುಳಿ! ಮಜ್ಜಿಗೆಹುಳಿ ತಿನ್ನಿಸುತ್ತಿರುವ ನಿಮ್ಮ ಕಾಲ ಮೇಲೆ ಬಿದ್ದು ಮುತ್ತಿನ ಮಳೆ ಸುರಿಸೋಣ ಅನಿಸುತ್ತಿದೆ..."

"ಮಜ್ಜಿಗೆಹುಳಿಯಲ್ಲಿ ಅಷ್ಟೊಂದು ನಶೆ ತುಂಬಿದೆಯೇ?!" ತೋರಿಕೆಯ ಆಶ್ಚರ್ಯ ಅವಳ ಮುಖದಲ್ಲಿ.

**"ಶ್ಯಾಮಲಾ, ಭೂಕಂಪ ಅನ್ನಿಸುತ್ತೆ. ಜಾಗ್ರತೆ!" ಅನ್ನುತ್ತಿದ್ದ ಹಾಗೆ ಯಾರೋ ತಳ್ಳಿದಂತೆ ಶ್ಯಾಮಲಾ, ರಭಸವಾಗಿ ಗೋಡೆಗೆ ಬಡಿದು ಬಿದ್ದಳು. ಬಿದ್ದ ರಭಸಕ್ಕೆ ಹಣೆಗೆ ಗಾಯವಾಗಿ ರಕ್ತ ಒಸರತೊಡಗಿತು. ತಟ್ಟನೆ ಅವಳತ್ತ ಓಡಿದ ಜಿತೇಂದ್ರ, ತನ್ನ ಕರ್ಚೀಫನ್ನು ಅವಳ ಗಾಯಕ್ಕೆ ಒತ್ತಿದ. ಭೂಕಂಪನ ತೀವ್ರವಾಗಿತ್ತು. ನಿಲ್ಲಲಾರದೆ ಶ್ಯಾಮಲಾ ನೆಲಕ್ಕೆ ಕುಸಿದಳು.**

"ಅದರ ಹೆಸರಲ್ಲೇ ನಶೆ ಇದೆ. ಬೇಗ... ಬೇಗ... ಬೇಗ ಬಡಿಸಿ ಶ್ಯಾಮಲಾ. ಮಜ್ಜಿಗೆಹುಳಿಗೆ ಜೈ! ಜೈ ಕರ್ನಾಟಕ ಮಾತೆ!!"

ಶ್ಯಾಮಲಾ ನಸುನಗುತ್ತಾ ಮತ್ತೊಂದು ಸಲ ಸೌಟಿನ ತುಂಬ ಮಜ್ಜಿಗೆಹುಳಿಯನ್ನು ಅವನ ತಟ್ಟೆಗೆ ಬಡಿಸಿದಳು.

"ನೀವು ಕೂತು ಬಡಿಸಿಕೊಳ್ಳಿ. ನಮ್ಮ ಸಂಪ್ರದಾಯಕ್ಕೇನೂ ಭಂಗ ಬರಲಾರದು..." ಎಂದ ತಾನೂ ನಗುತ್ತಾ.

ಹುಳಿ, ತೊವ್ವೆ, ಗೊಜ್ಜುಗಳಿಂದ ಅನ್ನವನ್ನು ತುಪ್ಪದೊಂದಿಗೆ ಕಲೆಸಿಕೊಳ್ಳುತ್ತಾ, ಕೋಸಂಬರಿ, ಹಪ್ಪಳ, ಈರುಳ್ಳಿ ಸಂಡಿಗೆ, ಉಪ್ಪಿನಕಾಯಿಗಳನ್ನು ನೆಂಚಿಕೊಳ್ಳುತ್ತಾ, ಊಟದ ಪರಿಯನ್ನು ನೆನೆಸಿಕೊಳ್ಳುತ್ತ ಊಟ ಮಾಡುತ್ತಿದ್ದ ಅವರಿಗೆ ತಮ್ಮ ಊರಿನಲ್ಲಿ, ತಮ್ಮ ಮನೆಯಲ್ಲಿ ಕುಳಿತು ಮೃಷ್ಟಾನ್ನ ಭೋಜನವನ್ನು ಆಸ್ವಾದಿಸುತ್ತಿರುವ ಅನುಭವ ಉಂಟಾಗಿತ್ತು.

"ರೀ ಶ್ಯಾಮಲಾ, ಮನಸ್ಸಿಗೆಷ್ಟು ಶಕ್ತಿ ಇದೆ ನೋಡಿ. ನೆನೆಸಿಕೊಂಡಷ್ಟಕ್ಕೇ ಅನುಭವ ಅನುಭೂತಿಯಾಗಿ ಪರಿವರ್ತನೆಗೊಂಡು ಮನಸ್ಸಿಗೆ ಸ್ವರ್ಗ ಸುಖ ನೀಡುತ್ತದೆ."

"ಹೌದು! ಆದ್ದರಿಂದಲೇ ನಾವು ಹಗಲುಗನಸಿನಲ್ಲಿ ಮುಳುಗಿರ್ತೀವಿ" ಎಂದು ಅವನ ಮಾತನ್ನು ಪೂರ್ತಿ ಒಪ್ಪಿದಳು ಶ್ಯಾಮಲಾ.